**ಕರ್ನಾಟಕ ಸರ್ಕಾರ**

**ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001**

**ಸಂಖ್ಯೆ: ಸಿ7(2)ಪ್ರಾ.ಶಿ.ಅ.ಶಾ.ಮ.ಲೈ.ಕಿ.40/2014-15** **ದಿನಾಂಕ: 05.10.2014**

**-: ಸುತ್ತೋಲೆ :-**

ವಿಷಯ: ರಾಜ್ಯದ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಲೈಂಗಿಕ ಕಿರುಕುಳ/ ಅತ್ಯಾಚಾರ ಹಾಗೂ ದೈಹಿಕ ಹಿಂಸೆ ನಡೆಯುತ್ತಿರುವುದನ್ನು ತಡೆಗಟ್ಟುವ ಬಗ್ಗೆ

ಉಲ್ಲೇಖ: ಈ ಕಛೇರಿ ಪತ್ರದ ಸಮ ಸಂಖ್ಯೆ :ದಿನಾಂಕ:23.07.2014

**********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ಶಾಲಾ ಕಾಲೇಜುಗಳಲ್ಲಿ ಮಕ್ಕಳ ಮತ್ತು ಮಹಿಳೆಯರ ಮೇಲೆ ಲೈಂಗಿಕ ಕಿರುಕುಳ, ದೈಹಿಕ ಹಿಂಸೆ ಹಾಗೂ ಅತ್ಯಾಚಾರದ ಪ್ರಕರಣಗಳು ವರದಿಯಾದ ಹಿನ್ನೆಲೆಯಲ್ಲಿ ಉಲ್ಲೇಖ(1)ರಂತೆ ಸುರಕ್ಷತಾ ಕ್ರಮಗಳ ಬಗ್ಗೆ ಸುತ್ತೋಲೆಯನ್ನು ಈಗಾಗಲೇ ನೀಡಲಾಗಿದೆ. ಆದಾಗ್ಯೂ ಸದರಿ ಪ್ರಕರಣಗಳು ಮರುಕಳಿಸುತ್ತಿದ್ದು ಸಂಪೂರ್ಣವಾಗಿ ಸದರಿ ಪ್ರಕರಣಗಳನ್ನು ತಡೆಗಟ್ಟುವಿಕೆ ಮತ್ತು ಸುರಕ್ಷತಾ ಕ್ರಮಗಳ ಅನುಷ್ಠಾನಕ್ಕಾಗಿ ರಾಜ್ಯದ ಎಲ್ಲಾ ಶಾಲೆಗಳನ್ನು ಪರಿಶೀಲನೆಗೆ ಒಳಪಡಿಸಲು ತೀರ್ಮಾನಿಸಿದ್ದು ಜಿಲ್ಲಾ ಹಂತದ ಉಪನಿರ್ದೇಶಕರು ನೋಡಲ್ ಅಧಿಕಾರಿಗಳಾಗಿ ತಾಲ್ಲೂಕು/ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ನೇತೃತ್ವದಲ್ಲಿ ಬಿ.ಆರ್.ಸಿ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕರು, ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರು, ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಹಾಗೂ ಸಿ.ಆರ್.ಪಿ.ಗಳನ್ನೊಳಗೊಂಡ ತ್ರಿಸದಸ್ಯ ಸಮಿತಿಯ ತಂಡಗಳನ್ನು ಅಗತ್ಯಕ್ಕನುಸಾರವಾಗಿ ರಚಿಸಿಕೊಂಡು ಎಲ್ಲಾ ಶಾಲೆಗಳನ್ನು ತಪಾಸಣೆಗೊಳಪಡಿಸಿ ಈ ಪತ್ರಕ್ಕೆ ಅಡಕಗೊಳಿಸಿರುವ ನಮೂನೆಯಲ್ಲಿ ಆನ್ ಲೈನ್ ಮೂಲಕ ದಿನಾಂಕ: 29.11.2014ರೊಳಗೆ ಸಲ್ಲಿಸಲು ತಿಳಿಸಿದೆ. ಹಾರ್ಡ್ ಕಾಪಿಯನ್ನು ಪುಸ್ತಕ ರೂಪದಲ್ಲಿ ಸ್ಪೈರಲ್ ಬೈಂಡಿಂಗ್ ಮಾಡಿಸಿ ಕ್ಷೇತ್ರ ಶಿಕ್ಷಣಾಧಿಕಾರಿಗಳ ದೃಢೀಕರಣದೊಂದಿಗೆ ದ್ವಿಪ್ರತಿಯಲ್ಲಿ ಸಲ್ಲಿಸುವುದು.(ಒಂದು ಪ್ರತಿ ನಿರ್ದೇಶಕರು, ಪ್ರಾಥಮಿಕ ಶಿಕ್ಷಣ ಮತ್ತು ಒಂದು ಪ್ರತಿ ನಿರ್ದೇಶಕರು, ಪ್ರೌಢ ಶಿಕ್ಷಣ)

ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಖರ ಪರಿಶೀಲನೆ ಹಾಗೂ ನಿಖರ ಮಾಹಿತಿಯ ಕ್ರೋಢೀಕರಣಕ್ಕೆ ಪರಿಶೀಲನಾ ತಂಡಗಳಿಗೆ ಅಗತ್ಯ ತಿಳುವಳಿಕೆ, ಮಾರ್ಗದರ್ಶನ, ಹಾಗೂ ಅಗತ್ಯವಿದ್ದಲ್ಲಿ ತರಬೇತಿಯನ್ನು ನೀಡುವುದು.

ತನಿಖಾ ತಂಡವು ಶಾಲೆಗೆ ಭೇಟಿ ನೀಡಿದ ಸಂದರ್ಭದಲ್ಲಿ ಶಾಲೆಯ ಮಕ್ಕಳ ಸುರಕ್ಷಾ ಸಮಿತಿ/ಪೋಷಕ ಸಮಿತಿಯ ಪದಾಧಿಕಾರಿಗಳು ಅಥವಾ ಸದಸ್ಯರುಗಳ ಪೈಕಿ ಇಬ್ಬರ ಉಪಸ್ಥಿತಿಯೊಂದಿಗೆ ಪರಿಶೀಲನಾ ಕಾರ್ಯವನ್ನು ನಡೆಸುವುದು. ಮೂಲ ದಾಖಲೆಗಳನ್ನು ಪರಿಶೀಲಿಸಿ ಮುಖ್ಯ ಶಿಕ್ಷಕರು/ಕಾರ್ಯದರ್ಶಿಯಿಂದ ದೃಢೀಕರಿಸಿದ ನಕಲು ಪ್ರತಿಗಳನ್ನು ಪಡೆದು ನಮೂನೆಯನ್ನು ತುಂಬುವುದು. ತಪ್ಪು ಮಾಹಿತಿ ನೀಡಿದಲ್ಲಿ ಸಂಬಂಧಿಸಿದ ಉಪನಿರ್ದೇಶಕರು/ ಕ್ಷೇತ್ರ ಶಿಕ್ಷಣಾಧಿಕಾರಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

ಸರ್ಕಾರಕ್ಕೆ ಸದರಿ ಮಾಹಿತಿಯನ್ನು ನಿಗದಿತ ಸಮಯದಲ್ಲಿ ಒದಗಿಸಬೇಕಾಗಿರುವುದರಿಂದ ವಿಳಂಬಕ್ಕೆ ಅವಕಾಶವಿಲ್ಲವೆಂದು ತಿಳಿಸಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,

ಇವರಿಗೆ

1. ರಾಜ್ಯದ ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ..................................................
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ..........................................

ಪ್ರತಿಯನ್ನು:

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ಗುಲ್ಬರ್ಗಾ
2. ಕಛೇರಿ ಪ್ರತಿ.

\\10.96.135.22\e\E\EST2\circular-se.har.docx

**ರಾಜ್ಯದ ಅನುದಾನಿತ / ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಲೈಂಗಿಕ ಕಿರುಕುಳ / ಅತ್ಯಾಚಾರ ಹಾಗೂ ದೈಹಿಕ ಹಿಂಸೆ ನಡೆಯುತ್ತಿರುವುದನ್ನು ತಡೆಗಟ್ಟುವ ಕುರಿತು ತ್ರಿಸದಸ್ಯ ಸಮಿತಿ ಪರಿಶೀಲಿಸಿ ವರದಿ ನೀಡಬೇಕಾದ ನಮೂನೆ**

| ಕ್ರ.ಸ | ವಿಷಯ | ಪರಿಶೀಲಿಸಿದ ವಿವರಗಳು |
|---|---|---|
| 1 | ಶಾಲೆಯ ಹೆಸರು ವಿಳಾಸ ಮತ್ತು ಡೈಸ್ ಕೋಡ್<br>(ಆಡಳಿತ ಮಂಡಳಿ ಯಾವ ವರ್ಗಕ್ಕೆ ಸೇರಿದೆ) | |
| 2 | ಶಾಲೆ ಪ್ರಾರಂಭಿಸಲು ಇಲಾಖೆಯಿಂದ ಅನುಮತಿ ಪಡೆಯಲಾಗಿದೆಯೇ ಆದೇಶ ಸಂಖ್ಯೆ ಮತ್ತು ದಿನಾಂಕ (ವಿವರ ನೀಡುವುದು)<br>ಅ) ಪೂರ್ವ ಪ್ರಾಥಮಿಕ<br>ಆ) ಪ್ರಾಥಮಿಕ 1 ರಿಂದ 5ನೇ ತರಗತಿ<br>ಇ) 06 ರಿಂದ 08 ನೇ ತರಗತಿ<br>ಈ) 09 ರಿಂದ 10 ನೇ ತರಗತಿ | |
| 3 | ಶಾಲೆಯ ನೋಂದಣಿ (ಶಿಕ್ಷಣ ಕಾಯ್ದೆಯಂತೆ ಮಾಡಲಾಗಿದೆಯೇ ವಿವರ ನೀಡುವುದು)<br>ಅ) ಪೂರ್ವ ಪ್ರಾಥಮಿಕ<br>ಆ) ಪ್ರಾಥಮಿಕ 1 ರಿಂದ 5ನೇ ತರಗತಿ<br>ಇ) 06 ರಿಂದ 08 ನೇ ತರಗತಿ<br>ಈ) 09 ರಿಂದ 10 ನೇ ತರಗತಿ | |
| 4 | ಆರ್.ಟಿ.ಇ ಅಡಿಯಲ್ಲಿ ಶಾಲೆಯನ್ನು ನೋಂದಾಯಿಸಲಾಗಿದೆಯೇ?(ಪ್ರತಿ ಲಗತ್ತಿಸುವುದು)<br>ಅ) ಪೂರ್ವ ಪ್ರಾಥಮಿಕ<br>ಆ) ಕಿರಿಯ ಪ್ರಾಥಮಿಕ | |
| 5 | ಶಾಲೆಯು ಪ್ರಥಮ ಮಾನ್ಯತೆ ಪಡೆದಿದೆಯೇ ಪಡೆದಿದ್ದಲ್ಲಿ ಆದೇಶ ಸಂಖ್ಯೆ ಮತ್ತು ದಿನಾಂಕ: ನಂತರ ಮಾನ್ಯತೆ ನವೀಕರಿಸಲಾಗಿದೆಯೇ? (ಹಾಗಿದ್ದಲ್ಲಿ ಎಲ್ಲಿಯವರೆಗೆ ನವೀಕರಿಸಲಾಗಿದೆ)<br>ಅ) ಪೂರ್ವ ಪ್ರಾಥಮಿಕ<br>ಆ) ಪ್ರಾಥಮಿಕ 1 ರಿಂದ 5ನೇ ತರಗತಿ<br>ಇ) 06 ರಿಂದ 08 ನೇ ತರಗತಿ<br>ಈ) 09 ರಿಂದ 10 ನೇ ತರಗತಿ | |
| 6 | ಶಾಲೆಯಲ್ಲಿ ಭೋಧಿಸುತ್ತಿರುವ ಮಾಧ್ಯಮ ಯಾವ ಮಾಧ್ಯಮದಲ್ಲಿ ಭೋಧಿಸಲು ಅನುಮತಿ ಪಡೆಯಲಾಗಿದೆ.<br>ಅ) 1 ರಿಂದ 5ನೇ ತರಗತಿ<br>ಆ) 06 ರಿಂದ 08 ನೇ ತರಗತಿ | |

| | | |
|---|---|---|
| | ಇ) 09 ರಿಂದ 10 ನೇ ತರಗತಿ<br>(ಆದೇಶ ಮತ್ತು ದಿನಾಂಕ, ಪ್ರತಿ ಶಾಲೆಯು ಮಾಧ್ಯಮವಾರು / ಪಠ್ಯಕ್ರಮವಾರು ಪ್ರತ್ಯೇಕ ನಮೂನೆಗಳಲ್ಲಿ ಮಾಹಿತಿ ಒದಗಿಸುವುದು ) | |
| 7 | ಶಾಲೆಯು ಯಾವ ಪಠ್ಯಕ್ರಮ ಮಾದರಿಗೆ ಸಂಬಂಧಿಸಿದ್ದಾಗಿದೆ<br>ಅ) 1 ರಿಂದ 5ನೇ ತರಗತಿ<br>ಆ) 06 ರಿಂದ 08 ನೇ ತರಗತಿ<br>ಇ) 09 ರಿಂದ 10 ನೇ ತರಗತಿ<br>1.ರಾಜ್ಯ ಪಠ್ಯಕ್ರಮ (ರಾಜ್ಯ ಪಠ್ಯಕ್ರಮ ಪುಸ್ತಕಗಳನ್ನು ಖರೀದಿ ಮಾಡಿರುತ್ತಾರೆಯೇ)<br>2.ಐ.ಸಿ.ಎಸ್.ಸಿ (ಸರ್ಕಾರದಿಂದ ನಿರಾಪೇಕ್ಷಣಾ ಪಡೆಯಲಾಗಿದೆಯೇ)<br>3.ಸಿ.ಬಿ.ಎಸ್.ಸಿ (ಸರ್ಕಾರದಿಂದ ನಿರಾಪೇಕ್ಷಣಾ ಪಡೆಯಲಾಗಿದೆಯೇ)<br>(ಪಡೆದಿದ್ದಲ್ಲಿ ವಿವರ ನೀಡುವುದು)<br>4. ಐ.ಸಿ.ಎಸ್.ಸಿ/ಸಿ.ಬಿ.ಎಸ್.ಸಿ ಅನುಮತಿ ಪಡೆದಿದ್ದಲ್ಲಿ ಮಂಡಳಿಗೆ ಸಂಯೋಜನೆ ಪಡೆದಿದೆಯೇ?<br>ಪಡೆಯದಿದ್ದಲ್ಲಿ ಯಾವ ಸಾಲಿನಲ್ಲಿ ಪಡೆಯಬೇಕಾಗಿತ್ತು ಆದೇಶದ ಪ್ರತಿಯನ್ನು ಮುಖ್ಯಶಿಕ್ಷಕರಿಂದ ದೃಢೀಕರಿಸಿ ಪಡೆದುಕೊಳ್ಳುವುದು | |
| 8 | ಶಾಲೆಗೆ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ<br>1.ಸಿಸಿಟಿವಿ ಅಳವಡಿಸಿದೆಯೇ?<br>(ಶಾಲೆಯ ಕಟ್ಟಡದ ಹೊರಗೆ ಮತ್ತು ಕೊಠಡಿಗಳ ಒಳಗಡೆ ಅಗತ್ಯವಿರುವಷ್ಟು ಅಳವಡಿಸಲಾಗಿದೆಯೇ? ಸುಸಜ್ಜಿತವಾಗಿ ಕಾರ್ಯನಿರ್ವಹಿಸುತ್ತಿವೆಯೇ}<br>2.ಅಗ್ನಿನಂದಕ ಅಳವಡಿಸಿದೆಯೇ?<br>3.ಬಹುಮಹಡಿ ಕಟ್ಟಡ ಆಗಿದ್ದಲ್ಲಿ ಸುರಕ್ಷತೆ ಗ್ರಿಲ್ ಅಳವಡಿಸಿದೆಯೆ?<br>4.ಶಾಲೆಯ ಮಕ್ಕಳ ಸುರಕ್ಷಾ ಯೋಜನೆ ಮತ್ತು ಕ್ರಿಯಾ ಯೋಜನೆ ತಯಾರಿಸಲಾಗಿದೆಯೇ? | |
| 9 | ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶಾಲೆಗೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆಯೇ<br>ಶಾಲೆಯ ಕಟ್ಟಡ ಆರ್.ಸಿ.ಸಿ, ಶೀಟು, ಹೆಂಚಿನದೇ ಸ್ವಂತದ್ದೇ/ಬಾಡಿಗೆಯೇ/ಭೋಗ್ಯವೇ(ಮಾಹಿತಿ | |

| | | |
|---|---|---|
| | ನೀಡುವುದು)<br>ಕುಡಿಯುವ ನೀರು ಶೌಚಾಲಯ (ಪ್ರತ್ಯೇಕವಾಗಿ ಗಂಡು ಮತ್ತು ಹೆಣ್ಣು ಮಕ್ಕಳ ಸಂಖ್ಯೆಗೆ ಅನುಗುಣವಾಗಿ ನಿರ್ಮಿಸಲಾಗಿದೆಯೇ/ಇಲ್ಲವೇ<br>ಆಟದ ಮೈದಾನ<br>ಶೈಕ್ಷಣಿಕವಾಗಿ ಮಕ್ಕಳು ಕಲಿಯಲು<br>ಗ್ರಂಥಾಲಯ ಹೊಂದಿದೆಯೇ?<br>ಪೀಠೋಪಕರಣಗಳು/ಪಾಠೋಪಕರಣಗಳನ್ನು ಒದಗಿಸಲಾಗಿದೆಯೇ?<br>ಕಾಂಪೌಂಡ್ ನಿರ್ಮಿಸಲಾಗಿದೆಯೇ? | |
| 10 | ಶಾಲೆಯಲ್ಲಿ ಮಕ್ಕಳ ಹಾಜರಾತಿ ಮತ್ತು ದಾಖಲಾತಿ ಮಾಧ್ಯಮವಾರು/ತರಗತಿವಾರು (ಪ್ರತಿ ತರಗತಿಗೆ ತಲೆ ಎಣಿಕೆ ಮಾಡಿದಾಗ) | |
| 11 | ಶಾಲೆಯಲ್ಲಿ ನೇಮಿಸಿಕೊಂಡಿರುವ ಶಿಕ್ಷಕರುಗಳ ಮಾಹಿತಿ<br>ನಿಗದಿತ ವಿದ್ಯಾರ್ಹತೆ ಹೊಂದಿರುವಬಗ್ಗೆ ಮಾಹಿತಿ<br>ಅ) ಶಿಕ್ಷಕರ ಹೆಸರು ಮತ್ತು ವಿದ್ಯಾರ್ಹತೆ<br>ಆ) ಭೋಧಕೇತರ ಸಿಬ್ಬಂದಿ ಮಾಹಿತಿ (ಪ್ರತ್ಯೇಕವಾಗಿರಲಿ) | |
| 12 | ಪೋಲೀಸ್ ಪರಿವೀಕ್ಷಣೆ ಆಗಿದೆಯೇ/ ಇಲ್ಲವೇ<br>(ಈ ಕಛೇರಿ ಸುತ್ತೋಲೆ ದಿ: 23.07.2014 ರಂತೆ) | |
| 13 | ಶಾಲೆಯಲ್ಲಿ ಪೋಷಕ ಸಮಿತಿ/ಮಕ್ಕಳ ಸುರಕ್ಷಾ ಸಮಿತಿ ರಚಿಸಲಾಗಿದೆಯೇ? | |
| 14 | ಶಾಲಾ ಕಟ್ಟಡದ ಎಲಿವೇಶನ್ ಭಾವಚಿತ್ರದ ಪ್ರತಿಯನ್ನು ತನಿಖಾ ತಂಡದೊಂದಿಗೆ ತೆಗೆಸಿದ ಒಂದೇ ಭಾವಚಿತ್ರದ ಪ್ರತಿ | |
| 15 | ಶಾಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ / ಬೋಧಕೇತರ ಸಿಬ್ಬಂದಿಗೆ ಸುರಕ್ಷತಾ ಕ್ರಮಗಳ ಬಗ್ಗೆ ತಿಳುವಳಿಕೆ ನೀಡಲಾಗಿದೆಯೇ? | |
| 16 | ಶಾಲಾ ಸಿಬ್ಬಂದಿಗೆ ಸೇವಾ ಭದ್ರತೆ ಒದಗಿಸಲಾಗಿದೆಯೇ? ಪ್ರತಿ ಶಿಕ್ಷಕರ /ಸಿಬ್ಬಂಧಿಯ ಬ್ಯಾಂಕ್ ಹೆಸರು ಮತ್ತು ಖಾತೆ ಸಂಖ್ಯೆನೀಡುವುದು | |
| 17 | ಪ್ರತಿ ವಿದ್ಯಾರ್ಥಿಗೆ ಮಾಧ್ಯಮವಾರು/ತರಗತಿವಾರು ನಿಗದಿಪಡಿಸಿರುವ ಶುಲ್ಕದ ವಿವರ | |

| | | |
|---|---|---|
| 18 | ಸಂದರ್ಶನ ಸಮಿತಿಯ ಅಭಿಪ್ರಾಯ | |
| 19 | ಸಂದರ್ಶನ ಸಮಿತಿ ಶಾಲೆಗೆ ಭೇಟಿ ನೀಡಿದ ದಿನಾಂಕ: | |

**:ಧೃಢೀಕರಣ:**

ಶಾಲೆಗೆ ಭೇಟಿ ನೀಡಿ ನಮೂನೆಯಲ್ಲಿನ ಪ್ರತಿಯೊಂದು ಅಂಶಗಳ ಬಗ್ಗೆ ದಾಖಲೆಗಳನ್ನು ಪರಿಶೀಲಿಸಿ ಮಾಹಿತಿಯು ಪಡೆಯಲಾಗಿದೆ ಮತ್ತು ಕ್ರಮಬದ್ದವಾಗಿದೆ ಎಂದು ದೃಡೀಕರಿಸಿದೆ

**ಸಂದರ್ಶನ ಸಮಿತಿಯ ಸದಸ್ಯರ ಸಹಿ**
**ಹೆಸರು, ಹುದ್ದೆ ಮತ್ತು ಮೊಹರು**

**ಶಾಲೆಯ ಮುಖ್ಯಶಿಕ್ಷಕರ ಸಹಿ**
**ಹೆಸರು, ಹುದ್ದೆ ಮತ್ತು ಮೊಹರು**

1.

2

3.

**ಮಕ್ಕಳ ಪೋಷಕ ಸಮಿತಿ/ಹಿತರಕ್ಷಣಾ ಸಮಿತಿ**
**ಸದಸ್ಯರ ಸಹಿ ಮತ್ತು ಹೆಸರು**

1.

2.

**ಕ್ಷೇತ್ರ ಶಿಕ್ಷಣಾಧಿಕಾರಿಗಳು**

. . . . . . . . . . . . **ತಾಲ್ಲೂಕು/ವಲಯ**

. . . . . . . . . . . . . . . . .**ಜಿಲ್ಲೆ**